
ಏಕಾಗ್ರತೆಯಿಂದ
ಆನಂದದಿಂದ
ಚೆನ್ನಾಗಿ
**ಅಧ್ಯಯನ ಮಾಡಿ**

# ವಿದ್ಯಾರ್ಥಿಗಳಿಗಿರಬೇಕಾದ ಗುಣಲಕ್ಷಣಗಳು

ವಿದ್ಯಾರ್ಥಿಪ್ರಭ ಜಿ. ಮನೋರಮಾ

(ಹಿಂದಿನ ಸಂಚಿಕೆಯಿಂದ)



**೩. ಆಸಕ್ತಿ:** 'ಆಸಕ್ತಿ' ಎನ್ನುವುದು ಜ್ಞಾಪಕಶಕ್ತಿಯ ತಂದೆಯಾದರೆ, 'ಶ್ರದ್ಧೆ' ಎನ್ನುವುದು ಅದರ ತಾಯಿ. ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಬೇಕು. ಆಸಕ್ತಿ, ಅಭಿರುಚಿಗಳೇ ಗುರಿಯನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಆಸಕ್ತಿ ಇದ್ದಾಗ ಮಾತ್ರ ೧. ವಿಷಯ ಅರ್ಥವಾಗುವುದು; ೨. ಅರ್ಥವಾದ ವಿಷಯ ಮಾತ್ರ ನೆನಪಿರಲು ಸಾಧ್ಯ; ೩. ಇನ್ನೂ ಹೆಚ್ಚು ವಿಚಾರಗಳನ್ನು ತಿಳಿಯಬೇಕೆಂಬ ಆಸೆ ಬೆಳೆಯುವುದು; ೪. ಗ್ರಹಣಶಕ್ತಿ ಅಧಿಕವಾಗುವುದು. ಆಸಕ್ತಿ ವಹಿಸದೆ ಅರೆಬರೆಯಾಗಿ ಗ್ರಹಿಸಿದರೆ, ಅದನ್ನು ಹೊರಗೆಳೆಯುವುದಕ್ಕೆ ಮಿದುಳು ಅಸಮರ್ಥವಾಗುವುದು.

**೪. ಶ್ರದ್ಧೆ:** ಆಸಕ್ತಿಯ ಮುಂದಿನ ಮೆಟ್ಟಿಲು ಶ್ರದ್ಧೆ. ಶ್ರದ್ಧೆಯಿಂದ, ನಿಷ್ಠೆಯಿಂದ ನಾವು ಸಾಗಬೇಕು. "ಶ್ರದ್ಧೆ ನೀ ಇದ್ದರೆ ನಾ ಗೆದ್ದೆ; ನೀನಿಲ್ಲದಿದ್ದರೆ ನಾ ಬಿದ್ದೆ" ಎನ್ನುವಂತೆ ಶ್ರದ್ಧೆ ನಮ್ಮನ್ನು ಕಾರ್ಯೋನ್ಮುಖರಾಗಲು ಹುರಿದುಂಬಿಸುತ್ತದೆ; ಕರ್ತವ್ಯನಿಷ್ಠೆಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಶ್ರದ್ಧೆ ಎನ್ನುವುದು ಮನುಷ್ಯಪ್ರಯತ್ನಗಳ ತಾಯಿಬೇರು. ಮನುಷ್ಯನಲ್ಲಿ ಹುದುಗಿರುವ ಶಕ್ತಿಯನ್ನು ಅದು ಉದ್ದೀಪನಗೊಳಿಸುತ್ತದೆ. ಶ್ರದ್ಧೆ ಇರುವಲ್ಲಿ ನಿರ್ಧಾರವೂ ಇರುತ್ತದೆ. ನಿರ್ಧಾರ ಇರುವಲ್ಲಿ ನಿರಾಸೆಗೆ ಜಾಗವಿಲ್ಲ.

**"ಶ್ರದ್ಧಾವಾನ್ ಲಭತೇ ಜ್ಞಾನಂ"** – ಶ್ರದ್ಧಾವಂತನಾಗಿರುವವನು ಜ್ಞಾನವನ್ನು ಪಡೆಯುತ್ತಾನೆಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. ಹೀಗಾಗಿ ಜ್ಞಾನಪ್ರಾಪ್ತಿಯಲ್ಲಿ ಶ್ರದ್ಧೆಯೇ ಪ್ರಧಾನ ಕಾರಣವಾಗಿದೆ.

**೫. ಪರಿಶ್ರಮ:** "ಕ್ರಮವಿಲ್ಲದೇ ಏನೇ ಪರಿಶ್ರಮ ಪಟ್ಟರೂ ವ್ಯರ್ಥ", "ಶ್ರಮದ ಮುಂದಿನ ಮೆಟ್ಟಿಲೇ ಫಲ", "ಶ್ರಮ ಪಡದೇ ಸುಖವಿಲ್ಲ; ಶ್ರಮವಿಲ್ಲದೇ ಫಲವಿಲ್ಲ", "ಕೈ ಕೆಸರಾದರೆ ಬಾಯಿ ಮೊಸರು" – ಈ ಮಾತುಗಳು ಪರಿಶ್ರಮದ ಮಹತ್ವವನ್ನು ಎತ್ತಿ ಹೇಳುತ್ತವೆ. ಆಸಕ್ತಿ ಮತ್ತು ಶ್ರದ್ಧೆಗಳಿಂದ, ಶಿಸ್ತಿನಿಂದ, ಶ್ರಮವಹಿಸಿ ಗುರಿ ಸಾಧನೆಯತ್ತ ಲಕ್ಷ್ಯ ನೀಡಬೇಕು. ಪರಿಶ್ರಮಕ್ಕೆ ಅಗತ್ಯವಾದ ದೃಢಸಂಕಲ್ಪ, ಮನೋಬಲ, ಉತ್ಸುಕತೆ, ಸಂಯಮ ಮತ್ತು ತಾಳ್ಮೆಗಳನ್ನು ಬೆಳೆಸಿಕೊಳ್ಳಬೇಕು.

**೬. ಆದ್ಯತೆ:** ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ತೊಡಗಿರುವಾಗ, ಮನೆಗೆಲಸ, ಟಿಪ್ಪಣಿ ತಯಾರಿಕೆ, ಕಿರುಪರೀಕ್ಷೆ – ಇವೆಲ್ಲ ಜೊತೆಜೊತೆಯಲ್ಲೇ ಕಡಿಮೆ ಅಂತರದಲ್ಲಿ ಬಂದುಬಿಡಬಹುದು. ಅಂತಹ ಸಮಯದಲ್ಲಿ ಯಾವುದು ಅತ್ಯವಶ್ಯ, ಕಾಲಾವಕಾಶ ಎಷ್ಟಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಆದ್ಯತೆಯ ಪ್ರಕಾರವಾಗಿ ಕಾರ್ಯನಿರ್ವಹಿಸುವುದು ಸೂಕ್ತ.

**೭. ಗುರಿಸಾಧನೆ:** ಗುರಿಯಿಲ್ಲದವನ ಬದುಕು ಬರಿ ಬರಡು. ಯಾವ ಊರಿಗೆ ಹೋಗಬೇಕೆಂದು ನಿರ್ಧರಿಸಿದ ಮೇಲೆ ತಾನೆ, ಹೇಗೆ ಹೋಗುವುದು? ಯಾವಾಗ ಹೋಗುವುದು? ಎಷ್ಟು ಗಂಟೆ ಪ್ರಯಾಣ? ಪ್ರಯಾಣ ದರ ಎಷ್ಟು? ಎಂದೆಲ್ಲಾ ಚಿಂತನೆ ಮಾಡುವುದು. ಅಂತೆಯೇ ೧. ನಾನು ಏನಾಗಬೇಕು? ನನ್ನ ಗುರಿಯೇನು? ೨. ನನ್ನ ಅಭಿರುಚಿ–ಆಸಕ್ತಿ ಯಾವ ವಿಷಯದಲ್ಲಿ? ೩. ಯಾವ ವಿಷಯಗಳನ್ನು ಗಹನವಾಗಿ ತಿಳಿಯಬೇಕು? – ಇವೆಲ್ಲವನ್ನೂ ನಿರ್ಧರಿಸಿ ಮುಂದುವರಿಯಬೇಕು. ಗುರಿಯನ್ನು ಖಚಿತವಾಗಿ ನಿರ್ಧರಿಸಿಕೊಂಡು, ಅದನ್ನು ತಲುಪುವವರೆಗೆ ಆತ್ಮವಿಶ್ವಾಸದೊಂದಿಗೆ ತಾಳ್ಮೆಯಿಂದ ಶ್ರಮಿಸಿ ಸಾಧಿಸಬೇಕು.

'ಸಾಧನೆ' ಎನ್ನುವ ಪದವೇ ಅದು ಸುಲಭದ ಕೆಲಸವಲ್ಲವೆನ್ನುವುದನ್ನು ಸೂಚಿಸುತ್ತದೆ. ಒಂದು ಸಾಧಾರಣ ಕಲ್ಲಿನಲ್ಲಿ ಶಿಲ್ಪಿ ಹೇಗೆ ಒಂದು ಭವ್ಯರೂಪವನ್ನು ಮನಸ್ಸಿನಲ್ಲಿಯೇ ಚಿತ್ರಿಸಿ, ಶ್ರದ್ಧಾಪೂರ್ವಕ ಸತತ ಶ್ರಮದಿಂದ, ನಿರಂತರ ಸಾಧನೆಯ ಮೂಲಕ ಒಂದು ಸುಂದರವಾದ ಶಿಲ್ಪವನ್ನು ನಿರ್ಮಿಸುವನೋ, ಅಂತೆಯೇ ವಿದ್ಯಾರ್ಥಿ ಕೂಡ ಗುರಿಸಾಧನೆಗಾಗಿ ನಿರಂತರ ಪ್ರಯತ್ನ ಮತ್ತು ಶ್ರಮವನ್ನು ಹಾಕಿ, ಯಶಸ್ಸು ಪಡೆಯಬೇಕು.

# ನಮ್ಮ ಸಂಸ್ಕೃತಿ ಪರಿಚಯ – ೬

ಆಂಗ್ಲ ಮೂಲ : ಸೀತಾ ಲಖಾನಿ; ಕನ್ನಡ ಅನುವಾದ : ರಘು ಎ.ಎನ್.



**ಆಧ್ಯಾತ್ಮಿಕತೆಯ ವಿವಿಧ ಮಾರ್ಗಗಳ ಬೋಧಕನಾಗಿ 'ಶ್ರೀಕೃಷ್ಣ' :** ನಿಜವಾದ ಧರ್ಮಬೋಧಕನಾಗಿ ಭೂಮಿಯಲ್ಲಿ ಅವತರಿಸಿದ ಶ್ರೀಕೃಷ್ಣನು ವಿಷ್ಣುವಿನ ಅವತಾರಗಳಲ್ಲಿ ಒಬ್ಬನಾಗಿದ್ದಾನೆ. ದೇವರೆಡೆಗೆ ಸಾಗಲು ಶ್ರೀಕೃಷ್ಣನು ವಿವಿಧ ಮಾರ್ಗಗಳನ್ನು ಉಪದೇಶಿಸುತ್ತಾನೆ. ಹಾಗೆಯೇ ಆಯಾ ಮಾರ್ಗಗಳನ್ನು ಬಳಸಿಕೊಂಡು ಯಾವರೀತಿ ಜೀವಿಸಬೇಕೆಂಬುದನ್ನೂ ತಿಳಿಸುತ್ತಾನೆ. "ಜೀವನವೆಂಬುದು ದೇವರು ಆಡಿಸುವ ಆಟ. ಅವನ ಆಟದಲ್ಲಿ ಅವನ ಜೊತೆ ಪಾಲ್ಗೊಳ್ಳಲು ನಾವು ಭೂಮಿಯ ಮೇಲೆ ಹುಟ್ಟಿದ್ದೇವೆ" ಎಂಬುದನ್ನು ಶ್ರೀಕೃಷ್ಣನು ಬೋಧಿಸುತ್ತಾನೆ. ಶ್ರೀಕೃಷ್ಣನು ತನ್ನ ಆತ್ಮಸಂಗಾತಿಯಾದ ರಾಧೆಯೊಡನೆ ಇರುತ್ತಾನೆ. ನವಿಲುಗರಿಯಿಂದ ಅಲಂಕೃತಗೊಂಡ ಕೂದಲುಳ್ಳ ಕೃಷ್ಣನು ಕೊಳಲನ್ನು ಹಿಡಿದಿರುವನು. ಭಗವದ್ಗೀತೆಯು ಶ್ರೀಕೃಷ್ಣನು ಉಪದೇಶಿಸಿದ ಪವಿತ್ರ ಧರ್ಮಗ್ರಂಥವಾಗಿದೆ.

**ವಿಘ್ನನಿವಾರಕನಾಗಿ ಮತ್ತು ಸಿದ್ಧಿದಾತನಾಗಿ 'ಗಣೇಶ':** ಗಣೇಶನು ಪಾರ್ವತೀದೇವಿಯ ಮಗ. ತನ್ನ ತಾಯಿಯನ್ನು ರಕ್ಷಿಸುವ ಸಲುವಾಗಿ ನಡೆದ ಜಗಳದಲ್ಲಿ ಗಣೇಶ ತನ್ನ ತಲೆಯನ್ನೇ ಕಳೆದುಕೊಳ್ಳುತ್ತಾನೆ. ನಂತರ ಪಾರ್ವತೀದೇವಿಯು ಗಣೇಶನ ಜೀವವನ್ನು ಉಳಿಸಿ, ಆನೆಯ ತಲೆಯನ್ನು ಜೋಡಿಸುತ್ತಾಳೆ. 'ವಿಘ್ನನಿವಾರಕ' ಮತ್ತು 'ಸಿದ್ಧಿದಾತ'ನಾದ್ದರಿಂದ ಗಣೇಶನಿಗೆ ಜನರು ಪ್ರಥಮ ಪೂಜೆಯನ್ನು ಮಾಡುತ್ತಾರೆ. ಶಾಲೆಗೆ ಸೇರುವ, ಪ್ರಯಾಣ ಮಾಡುವ, ಹಬ್ಬಗಳನ್ನು ಆಚರಿಸುವ ಅಥವಾ ಯಾವುದೇ ಶುಭಕಾರ್ಯಗಳನ್ನು ಕೈಗೊಳ್ಳುವ ಮೊದಲು ಗಣೇಶನನ್ನು ಪೂಜಿಸುತ್ತಾರೆ. ಗಣೇಶನು ಧೈರ್ಯಶಾಲಿಯಾಗಿರುವುದಲ್ಲದೆ ಜ್ಞಾನಿಯೂ ಆಗಿರುವನು. ಮಕ್ಕಳು ಗಣೇಶನ ಕಥೆಗಳಿಂದ ಧೈರ್ಯಶಾಲಿಗಳಾಗುವ ಮತ್ತು ಜಾಣರಾಗುವ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುತ್ತಾರೆ.



**ದೇವರು ಸ್ವರ್ಗದಲ್ಲಿ ಮಾತ್ರವಲ್ಲದೆ ಇಲ್ಲಿಯೂ ಇರುವನು:** ದೇವರು ಸ್ವರ್ಗದಲ್ಲಿ ಮಾತ್ರ ಇರುವುದಲ್ಲದೆ ಇಲ್ಲಿಯೂ ಇರುವನು. ಅವನು ಯಾವಾಗಲೂ ನಮ್ಮೊಂದಿಗೆ ಇರುವನು. ಆದರೆ ನಾವು, ಅವನನ್ನು ಸುಲಭವಾಗಿ ತಿಳಿಯಲಾರೆವು. ಮನುಷ್ಯನಂತೆ, ಪಶು–ಪಕ್ಷಿಗಳಂತೆ, ಮರ ಗಿಡಗಳಂತೆ, ಗ್ರಹ–ನಕ್ಷತ್ರ ಮಂಡಲದಂತೆ ದೇವರು ನಮ್ಮ ಸುತ್ತಮುತ್ತಲೂ ಇರುವನು. ಈ ಎಲ್ಲದರಲ್ಲಿಯೂ ಇರುವ ದೇವರನ್ನು ನಾವು 'ಬ್ರಹ್ಮ' ಎನ್ನುತ್ತೇವೆ. ನಮ್ಮಲ್ಲಿಯೂ ಇರುವ ಈ ಬ್ರಹ್ಮನನ್ನೇ ನಾವು 'ಆತ್ಮ' ಎನ್ನುತ್ತೇವೆ. ಈ ಆತ್ಮನೇ ಮನುಷ್ಯ ಹಾಗೂ ಇತರ ಎಲ್ಲ ಜೀವಿಗಳ ಮುಖಾಂತರ ಎಲ್ಲ ಅನುಭವಗಳನ್ನೂ ಪಡೆದುಕೊಳ್ಳುತ್ತಿರುವನು.



**ಎಲ್ಲರಲ್ಲಿಯೂ ಎಲ್ಲವಾಗಿಯೂ ಇರುವ ದೇವರೇ 'ಬ್ರಹ್ಮ':** ದೇವರು ಪ್ರತಿಯೊಂದರಲ್ಲಿಯೂ ಇರುವುದರಿಂದ ನಾವು ಬೇರೆಯವರಿಗೆ ಕೆಡಕು ಅಥವಾ ತೊಂದರೆಯನ್ನು ಉಂಟುಮಾಡಬಾರದು. ಪ್ರಾಣಿಗಳು, ಸಸ್ಯಗಳು ಮತ್ತು ಪ್ರಕೃತಿಯನ್ನು ನಮ್ಮಂತೆಯೇ ಎಂದು ಭಾವಿಸಿ ಗೌರವಿಸಬೇಕು. ನಾವು ಇಡೀ ಪರಿಸರವನ್ನು ದೇವರೆಂದು ತಿಳಿದು ಅದನ್ನು ಕಾಪಾಡಬೇಕು.


**ಎಲ್ಲರಲ್ಲಿಯೂ ಇರುವ ದೇವರೇ 'ಆತ್ಮ':** ಪ್ರತಿಯೊಬ್ಬರೂ ದೇವರ ಒಂದು ಕಿಡಿ. ದೇವರು ಎಲ್ಲರಲ್ಲಿಯೂ ಬೆಳಕಿನ ಕಿಡಿಯಾಗಿ ಹೊಳೆಯುತ್ತಿರುವನು. ನಮ್ಮಲ್ಲಿರುವ ಆ ದೇವರನ್ನೇ ನಾವು 'ಆತ್ಮ'ನೆಂದು ಕರೆಯುವುದು. ನಾವು ನಿರಂತರ ಪ್ರಯತ್ನದಿಂದ ಪ್ರಾಮಾಣಿಕವಾಗಿ, ಒಂದು ಕಡೆ ಕುಳಿತು ಧ್ಯಾನಿಸಿದರೆ ಆಗ ನಮಗೆ ತಿಳಿಯುತ್ತದೆ, ನಾವು ಕೂಡ ದೇವರ ಒಂದು ಕಿರಣವಿದ್ದಂತೆ ಎಂದು. ಆದ್ದರಿಂದಲೇ ಮತ್ತೊಬ್ಬರಿಗೆ ನಾವು ನಮಸ್ಕರಿಸುವಾಗ ಕೈಗಳನ್ನು ಜೋಡಿಸುತ್ತೇವೆ. ಇದರರ್ಥ, "ನಿನ್ನಲ್ಲಿರುವ ದೇವನಿಗೆ ನಮಸ್ಕರಿಸುತ್ತೇನೆ" ಎಂದು. ✦

# ಭಗವಂತನನ್ನೇ ಬರಹಗಾರನನ್ನಾಗಿ ಮಾಡಿಕೊಂಡ ಭಕ್ತೆ!


**1** ಪೆರಿಯಾಳ್ವಾರರಿಗೆ ಆಂಡಾಳ್ ಇದ್ದ ಹಾಗೆ, ನಾಮದೇವರಿಗೆ ಜನಾಬಾಯಿ!
ಪಂಡರಿಪುರದಲ್ಲಿ ನಾಮದೇವರ ಮನೆಯಲ್ಲಿ ಸದಾಕಾಲವೂ ಪಾಂಡುರಂಗನ ನಾಮಸಂಕೀರ್ತನೆ ನಡೆಯುತ್ತಿತ್ತು. ಜನಾಬಾಯಿಯು ಸಮರ್ಪಣಾಭಾವದಿಂದ ಪಾಂಡುರಂಗನನ್ನೂ, ಅವನ ಭಕ್ತರನ್ನೂ ಸೇವಿಸುತ್ತಿದ್ದಳು.


**2** ಪಾಂಡುರಂಗನ ಮಂದಿರದಲ್ಲಿ ಭಕ್ತರು ಭಗವನ್ನಾಮ ಸಂಕೀರ್ತನೆಯನ್ನು ಮಾಡುತ್ತ ರಾತ್ರಿಯೆಲ್ಲ ನರ್ತಿಸುತ್ತಿದ್ದರು. ಜನಾಬಾಯಿಯೂ ಅವರ ಜೊತೆಯಲ್ಲಿ ಸೇರಿ ಭಾವಪರವಶಳಾಗುತ್ತಿದ್ದಳು.


**3** ಒಂದು ರಾತ್ರಿ ಜನಾಬಾಯಿ ಭಕ್ತರಿಗಾಗಿ ಅಡುಗೆ ಮಾಡಲು ದೇವಸ್ಥಾನದಿಂದ ಹೊರಟು ಮನೆಗೆ ಬಂದಳು. ಇವಳು ಮನೆಯಲ್ಲಿ ಇಲ್ಲದ ಸಮಯ ನೋಡಿ ಪಕ್ಕದ ಮನೆಯವಳು, ಅಡುಗೆ ಮಾಡಲು ಇಟ್ಟಿದ್ದ ಬೆರಣಿಗಳನ್ನೆಲ್ಲ ತೆಗೆದುಕೊಂಡು ಹೋಗಿಬಿಟ್ಟಿದ್ದಳು.




**4** ದೊಡ್ಡ ಜಗಳವಾಯಿತು. ಕೂಡಲೇ ಅಲ್ಲಿಗೆ ಬಂದ ನಾಮದೇವರು ಜನಾಬಾಯಿಯು ದುಃಖಿತಳಾಗಿರುವುದನ್ನು ಕಂಡರು.




5
ನಾನು ನಿನ್ನ ಬೆರಣಿಗಳನ್ನು ತೆಗೆದುಕೊಂಡೇ ಇಲ್ಲ.
ಜನಾ, ನೀನೇನು ಹೇಳುತ್ತಿದ್ದೀಯಾ? ಅವು ನಿನ್ನ ಬೆರಣಿಗಳೇ ಹೌದೆಂದು ಹೇಗೆ ಖಚಿತವಾಗಿ ಹೇಳಬಲ್ಲೆ?
ಇಲ್ಲ, ನೀನೇ ಬೆರಣಿಗಳನ್ನು ತೆಗೆದುಕೊಂಡಿರುವುದು. ಅದು ಸತ್ಯವೆಂದು ತೋರಿಸುತ್ತೇನೆ.
ಅಪ್ಪಾ, ನಾನು ತೋರಿಸಬಲ್ಲೆ.


6
ಪಕ್ಕದ ಮನೆಯಲ್ಲಿದ್ದ ಬೆರಣಿಗಳನ್ನೆಲ್ಲ ನಾಮದೇವರ ಮನೆಗೆ ತರಲಾಯಿತು.
ಹೇ ಭಗವಂತ! ಓ ಪಾಂಡುರಂಗ! ಕರುಣಾಮಯ! ಭಕ್ತರ ಸೇವೆ ಮಾಡುವಾಗಲೂ, ಬಟ್ಟೆಗಳನ್ನು ತೊಳೆಯುವಾಗಲೂ, ಬೆರಣಿ ತಟ್ಟುವಾಗಲೂ 'ವಿಠಲ ವಿಠಲ' ಎಂದೇ ನಾನು ಜಪಿಸುವುದು ಸತ್ಯವಾಗಿದ್ದರೆ ಇದನ್ನು ಖಚಿತಪಡಿಸು.


7
ಜನಾಬಾಯಿ ಬೆರಣಿಗಳನ್ನು ಒಂದೊಂದನ್ನಾಗಿ ನೆಲದ ಮೇಲೆ ಹಾಕತೊಡಗಿದಳು. ಜನಾಬಾಯಿಯ ಬೆರಣಿಗಳು ಕೆಳಕ್ಕೆ ಬೀಳುವಾಗ, 'ವಿಠಲ ವಿಠಲ' ಎನ್ನುತ್ತಿದ್ದವು.
ಬೇರೆ ಬೆರಣಿಗಳು ಬಿದ್ದಾಗ 'ಧಡ್' ಎಂದು ಶಬ್ದವಾಗುತ್ತಿತ್ತು.
ವಿಠಲ
ವಿಠಲ